# <u>ಕಾರ್ಮಿಕ ನ್ಯಾಯಾಲಯ, ಮೈಸೂರು.</u>

**Ref**:10/2025

ಡಬ್ಲ್ಯೂ.ಡಬ್ಲ್ಯೂ-1

**<u>ದಿನಾಂಕ 01.04.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>**

**ಪಾಟೀ ಸವಾಲುಃ 2 ನೇ ಪಕ್ಷಗಾರ ಸಂಖ್ಯೆ-2 ರವರ ಪರ ಶ್ರೀ..ವಿ.ಎಲ್.ಪಿ. ವಕೀಲರಿಂದಃ**

ನಾನು 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಯಲ್ಲಿ ಯಾವಾಗ ಕೆಲಸಕ್ಕೆ ಸೇರಿದ್ದೆ ಎಂದರೆ ಸಾಕ್ಷಿ ನಾನು 2 ನೇ ಪಕ್ಷಗಾರರ ಸಂಖ್ಯೆ-1 ರವರ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿದ್ದೆ ಎನ್ನುತ್ತಾರೆ. ಯಾವುದೇ ಕಾರ್ಮಿಕರಿಗೆ ಕೆಲಸಕ್ಕೆ ಸೇರುವಾಗ ನೇಮಕಾತಿ ಪತ್ರ ನೀಡುತ್ತಾರೆ ಎಂದರೆ ಸರಿ. ನನ್ನನ್ನು ಕೆಲಸಕ್ಕೆ ಸೇರಿಸಿಕೊಂಡಿರುವವರು 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಯವರು. ನನಗೆ ವೇತನವನ್ನು ಸರಿಯಾಗಿ ನೀಡುತ್ತಿದ್ದರು ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ಪಿ.ಎಫ್. ಮತ್ತು ಇ.ಎಸ್.ಐ. 2 ನೇ ಪಕ್ಷಗಾರರ ಸಂಖ್ಯೆ-1 ರವರ ನೀಡುತ್ತಿದ್ದರು. ನನಗೆ ಇಲ್ಲಿಯವರೆಗೂ ವೇತನ ಪ್ರಮಾಣ ಪತ್ರವನ್ನು ನೀಡಿರುವುದಿಲ್ಲ. ಪಿ.ಎಫ್. ಹಾಗೂ ಇ.ಎಸ್.ಐ. ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿಲ್ಲ. ಸಾಕ್ಷಿ ನಿ.ಡಬ್ಲ್ಯೂ-1 ರ ದಾಖಲೆಯನ್ನು ತೋರಿಸಿ ಅದು ಇ.ಎಸ್.ಐ. ದಾಖಲೆ ಎನ್ನುತ್ತಾರೆ. ನಿ.ಡಬ್ಲ್ಯೂ-1 ರ ದಾಖಲೆಯು ಅನುಭವ ಪಡೆದಿರುವ ಬಗ್ಗೆ ನೀಡಿರುವ ದಾಖಲೆ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು 2 ನೇ ಪಕ್ಷಗಾರರ ಸಂಖ್ಯೆ-1 ರವರು ನೀಡಿರುತ್ತಾರೆ. ನಾನು ಇ-ಪೆಹೆಚಾನ್ ದಾಖಲೆಯನ್ನು ನ್ಯಾಯಾಲಯದ ಮುಂದೆ ತಂದು ಹಾಜರು ಪಡಿಸುತ್ತೇನೆ. Hitachi ಸಂಸ್ಥೆಗೆ ನನ್ನನ್ನು deputation ಮೇಲೆ ವರ್ಗಾವಣೆ ಮಾಡಿದ್ದರು ಎಂದರೆ ಸಾಕ್ಷಿ ಸರಿ ಎಂದು ಉತ್ತರಿಸಿ, ಅಲ್ಲಿ ಟೆಂಡರ್ ಮುಗಿದು ಹೋಗಿತ್ತು ಎನ್ನುತ್ತಾರೆ. ದಿನಾಂಕಃ 06.06.2023 ರಲ್ಲಿ ನಿ.ಡಬ್ಲ್ಯೂ-5 ರಂತೆ ನನ್ನನ್ನು ಕೆಲಸದಿಂದ ತೆಗೆದಿರುವ ಬಗ್ಗೆ ಪತ್ರ ನೀಡಿದ್ದರು ಎಂದರೆ ಸರಿ.

ನನ್ನನ್ನು ದಿನಾಂಕಃ06.06.2023 ರಲ್ಲಿ ಕೆಲಸದಿಂದ ತೆಗೆದಿರುತ್ತಾರೆ, ದಿನಾಂಕಃ12.02.2023 ರಲ್ಲಿ ನನ್ನನ್ನು ಕೆಲಸದಿಂದ ತೆಗೆದಿಲ್ಲ ಎಂದರೆ ಸರಿಯಲ್ಲ. ನಾನು 2 ನೇ ಪಕ್ಷಗಾರರ ಸಂಖ್ಯೆ-1 ರವರ ಸಂಸ್ಥೆಯಲ್ಲಿ ವಜಾಗೊಂಡಿರುವುದಿಲ್ಲ, Hitachi ಸಂಸ್ಥೆಯಲ್ಲಿ ವಜಾಗೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಗುತ್ತಿಗೆ ಕಾರ್ಮಿಕನಾಗಿ 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದೆ ಎಂದರೆ ಸರಿಯಲ್ಲ. ಹಾಗಿದ್ದ ಮೇಲೆ 2 ನೇ ಪಕ್ಷಗಾರರ ಸಂಖ್ಯೆ-2 ರವರನ್ನು ಈ ಪ್ರಕರಣದಲ್ಲಿ ಏಕೆ ಪಕ್ಷಗಾರರನ್ನಾಗಿ ಸೇರಿಸಿದ್ದೀರ ಎಂದರೆ ಸಾಕ್ಷಿ ಅವರ ಕಡೆಯಿಂದ ವೇತನ ಸಂದಾಯವಾಗುತ್ತಿತ್ತು ಆದ್ದರಿಂದ ಅವರನ್ನು ಈ ಪ್ರಕರಣದಲ್ಲಿ ಸೇರಿಸಿರುತ್ತೇವೆ ಎನ್ನುತ್ತಾರೆ. ದಿನಾಂಕಃ 12.02.2023 ರಲ್ಲಿ ನನ್ನನ್ನು ವಜಾಗೊಳಿಸಿಲ್ಲ, ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಮಾಣ ಪತ್ರವನ್ನು ನಮ್ಮ ವಕೀಲರು notary ಮಾಡಿಸಿರುತ್ತಾರೆ. Notary ಆದ ನಂತರ ಪ್ರಮಾಣ ಪತ್ರಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಾನು ಆಡಳಿತ ವರ್ಗದವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಕರಣ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ಅರ್ಜಿಯಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**